doc-519
T.P-2

Reg No M 1229 42nd Year Sri "Satyavadi" Mysore 10—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ] ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯುರು

ಭಾರತದೊಡನೆ ಕಾಶ್ಮೀರದ ಸೇರ್ಪಡೆ ಅಖೈರಾದುದು

ತೊಲಗಿರೆಂದು ಪಾಕಿಸ್ತಾನಕ್ಕೆ ಭಾರತ ಮುಸ್ಲಿಂ ಲೀಗ್ ಅಧ್ಯಕ್ಷ ಇಸ್ಮಾಯಿಲ್‌ರವರ ಸೂಚನೆ

ಶ್ರೀನಗರ 9 — ಕಾಶ್ಮೀರ ರೇಡಿಯೊದಲ್ಲಿ ಭಾರತ ಮುಸ್ಲಿಂ ಲೀಗು ಅಧ್ಯಕ್ಷರೂ, ಪಾರ್ಲಿಮೆಂಟು ಸದಸ್ಯರೂ ಆದ ಶ್ರೀ ಮಹಮದ್ ಇಸ್ಮಾಯಿಲ್‌ರವರು ಭಾಷಣಮಾಡುತ್ತಾ, ಘಟನಾವಳಿಗಳನ್ನನುಬದ್ಧವಾಗಿ, ಕಾನೂನುಬದ್ಧವಾಗಿ ಹಾಗೂ ಜನಾಭಿಪ್ರಾಯದಂತೆ ಕಾಶ್ಮೀರ ಭಾರತದ ಅಂತರ್ಗತ ರಾಜ್ಯವಾಗಿದೆ ಎಂಬುದಾಗಿ ಘೋಷಿಸಿದರು. ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತ ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರ ಭಾಗದಿಂದ ಅದು ವಾಪಸಾಗಬೇಕೆಂದು ತಿಳಿಸಿದರು.

——

ಪರಿಹಾರ ಕೆಲಸಗಳಿಗೆ ಕೇಂದ್ರದ ಹಣ

ನವದೆಹಲಿ 9 — ಪ್ರವಾಹಗಳು, ಭೂಕಂಪ ಸಾಂಕ್ರಾಮಿಕ ರೋಗಗಳು ಭಾರಿ ಅಪಘಾತಗಳು ಮುಂತಾದ ಪ್ರಾಕೃತಿಕ ಆಪತ್ತುಗಳು ಸಂಭವಿಸಿದನಂತರ ಕೈಗೊಳ್ಳುವ ಪರಿಹಾರ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರದವರು 1956 ರ ಆದಿಯಿಂದಲೂ 9 ರಾಜ್ಯಗಳಿಗೆ ಒಟ್ಟು 23 60 ಕೋಟಿ ರೂಗಳನ್ನು ನೀಡಿರುವರು

——

ಈ ರಾತ್ರಿ ಬ್ರಿಟ್ ಪ್ರಧಾನಿಯಿಂದ ರೇಡಿಯೋ ಭಾಷಣ

ನವದೆಹಲಿ 9 — ಬ್ರಿಟನ್ನಿನ ಪ್ರಧಾನ ಮಂತ್ರಿಗಳಾದ ಶ್ರೀ ಹೆರಾಲ್ಡ್ ಮ್ಯಾಕ್ಮಿಲ್ಲನ್‌ರವರು ಜನವರಿ 10 ರಂದು ರಾತ್ರಿ 8-30 ಗಂಟೆಗೆ ದೆಹಲಿಯಿಂದ ಪ್ರಸಾರ ಭಾಷಣ ಮಾಡುವುದನ್ನು ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಪುನಃ ಪ್ರಸಾರ ಮಾಡಲಾಗುವುದು. ಈ ಕಾರ್ಯಕ್ರಮವನ್ನು 491 8 ವಿಾಟರ್ ಗಳಲ್ಲಿ (610 ಕಿಲೋ ಸೈಕಲ್ಸ್) ಕೇಳಿಸಿಕೊಳ್ಳಬಹುದು.

ಕುಮಾರ್‌ಪಾರ್ಕಿನ ಬಳಿ ವಿದ್ಯಾರ್ಥಿ ಸತ್ತಿದ್ದು ಪತ್ತೆ

ಬೆಂಗಳೂರು 8 — ಬಿ ಎಂ. ಎಸ್ ಇಂಜಿನಿಯರಿಂಗು ಕಾಲೇಜಿನ ವಿದ್ಯಾರ್ಥಿ 28 ವರ್ಷದ ಮುಕುಂದರಾವ್ ಕುಮಾರ ಪಾರ್ಕಿನ ರೈಲ್ವೆ ಮೇಲು ಸೇತುವೆಯಿಂದ ಒಂದು ಫರ್ಲಾಂಗು ದೂರದಲ್ಲಿ ಸತ್ತು ಬಿದ್ದಿದ್ದು ಪತ್ತೆ ಆಗಿದೆ. ಬೆಳಿಗ್ಗೆ 7ಗಂಟೆಯಲ್ಲಿ ಅಲ್ಲಿ ಹೋಗುತ್ತಿದ್ದ ಜನ ಯುವಕ ಪ್ರಜ್ಞಾಶೂನ್ಯನಾಗಿ ಬಿದ್ದಿರುವುದನ್ನು ಕಂಡು ಕಾಫಿ ತಂದರು ಪೋಲೀಸರು ಹೋಗುವ ವೇಳೆಗೆ ಮುಕುಂದರಾವ್ ಸತ್ತಿದ್ದನು ಎಂದು ಪೋಲೀಸು ವಲಯದ ವರದಿ. ಅತನ ಬಲಗಣ್ಣು ಒಳಕ್ಕೆ ಸ್ವಲ್ಪ ಗಾಯವಾಗಿದೆಯೆಂದು ಗೊತ್ತಾಗಿದೆ

ಮೆರವಣಿಗೆಯಲ್ಲಿ 63 ಆನೆಗಳು

ಗೌಹತಿ 9— ಕಾಂಗ್ರೆಸ್ಸಿನ 63 ನೇ ಅಧಿವೇಶನವನ್ನು ಗುರ್ತಿಸುವದಕ್ಕೋಸ್ಕರ ಪ್ರಾಗ್ಜ್ಯೋತಿಷ್ಪುರದಲ್ಲಿ ಈ 14 ನೇ ತಾರೀಖಿನಿಂದ ನಡೆಯುವ 63 ನೇ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರ ಮೆರವಣಿಗೆ 63 ಆನೆಗಳಿಂದ ಕೂಡಿರುವುದು

ಗೋವಧೆ ನಿರೋಧ

ಅಹಮದಾಬಾದಿನಲ್ಲಿ ಗೋ ಹತ್ಯ ನಿರೋಧವು ಈ 20 ನೇ ತಾರೀಖಿನಿಂದ ಜಾರಿಗೆ ಬರುವುದು.

——

ಮೈಸೂರು 9 — ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ, ಸರಕಾರಿ ಎಂಜಿನೀರಿಂಗು ಕಾಲೇಜು ಮತ್ತು ಮೆಡಿಕಲ್ ಕಾಲೇಜಿಗೆ ಹೆಚ್ಚು ವಿದ್ಯಾರ್ಥಿಗಳು ಸೇರಲು ಅನುಕೂಲಿಸುವಂತೆ ಕೇಂದ್ರ ಸರಕಾರದ ಸಹಾಯದಿಂದ ದೊಡ್ಡದು ಮಾಡಲಾಗುವುದು.

ಚಲನಚಿತ್ರಗಳ ರಫ್ತು

ನವದೆಹಲಿ 9— 1957 ಮೊದಲನೆಯ 8 ತಿಂಗಳಲ್ಲಿ ಭಾರತದಿಂದ ಚಲನಚಿತ್ರಗಳನ್ನು ರಫ್ತು ಮಾಡಿ 72.45 ಲಕ್ಷ ರೂಗಳಷ್ಟು ವಿದೇಶಿ ವಿನಿಮಯ ಧನವನ್ನು ಗಳಿಸಲಾಯಿತು : ಒಟ್ಟು 154 ಲಕ್ಷ ಅಡಿಗಳಷ್ಟು ಚಲನಚಿತ್ರಗಳನ್ನು ರಫ್ತು ಮಾಡಲಾಯಿತು.

ಮೈಸೂರು ಗವರ್ನರ್

ಅಲಹಾಬಾದು ೯— ಮೈಸೂರು ಗವರ್ನರ್ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಪರಿವಾರ ಸಮೇತ ಇಲ್ಲಿಗೆ ಖಾಸಗಿ ಭೇಟಿ ಇತ್ತಿರುವರು ; ಪವಿತ್ರ ಸಂಗಮದಲ್ಲಿ ಸ್ನಾನಮಾಡಿ, ಕೋಟೆಯಲ್ಲಿನ ಅಕ್ಷಯವೃತ್ತನ್ನು ನೋಡಿದರು : ಈ ರಾತ್ರಿ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

ತೀರ್ಮಾನ ಮುಂದಕ್ಕೆ

ಮಧ್ಯಪ್ರದೇಶದ ಸರಕಾರವು ನೆರೆಹಾವಳಿಗೀಡಾದ ಪ್ರದೇಶದ ಜನರ ಅನುಕೂಲಕ್ಕಾಗಿ ಬಹಿರಂಗ ಮಾರುಕಟ್ಟೆಯಲ್ಲಿ 5 ಲಕ್ಷ ಮಣ ಅಕ್ಕಿ ಕೊಳ್ಳಬೇಕೆಂದಿದ್ದ ನಿರ್ಧಾರವನ್ನು ಮುಂದಕ್ಕೆ ಹಾಕಿರುವುದು

ಪರ್ಯಾಲೋಚನೆ

ಪ್ಯಾರಿಸ್ 8— ರಷ್ಯಾ ದೊಡನೆ ಅನಾಕ್ರಮಣ ಒಪ್ಪಂದದ ಬಗ್ಗೆ ಬ್ರಿಟನ್ ನೀಡಿರುವ ಸಲಹೆ ಕುರಿತು ನಾಟೋ ಖಾಯಂ ಕೌನ್ಸಿಲ್ಲು ಪರ್ಯಾಲೋಚನೆ ಪ್ರಾರಂಭಿಸಿತು.

× ವಾಷಿಂಗ್ಟನ್ 9 — ಸ್ಥಳಯುಗದಲ್ಲಿ ಸವಾಲುಗಳೆನ್ನೆದುರಿಸಲು ಅಮೆರಿಕದ ಜನರು ಒಪ್ಪಬೇಕೆಂದು ಐಕ್ ಕರೆಕೊಟ್ಟರು

ಸುದ್ದಿಗಳು

ನವದೆಹಲಿ 9 — ಸಾರ್ವಜನಿಕ ಅಭಿಪ್ರಾಯ ಪಡೆಯುವ ಸಲುವಾಗಿ ಬಿಡಲಾಗಿರುವ ಭೂಸ್ವಾಧೀನ ಬಗ್ಗೆ ಕೇರಳ ಕಮ್ಯುನಿಸ್ಟು ಪಕ್ಷದಲ್ಲಿ ಮತಭೇದ ಆಗಿರುವೆಂದು ಗೊತ್ತಾಗಿದೆ ಮತಭೇದ ಪರಿಹಾರ ವಿಾಡಿಕಾದವುಗಳ ಬಗ್ಗೆ ಎಂದು ಗೊತ್ತಾಗಿದೆ.

ಂ ಂ

ನವದೆಹಲಿ ೯— ಬ್ರಿಟಿಷ್ ಪ್ರಧಾನಿ ಮೆಕ್ಮಿಲನರು ಪತ್ನಿ ಸಮೇತ ರಾಜಘಾಟಿಗೆ ಹೋಗಿ ಗಾಂಧೀ ಸಮಾಧಿಗೆ ಗೌರವ ಸಲ್ಲಿಸಿ, ನಂತರ ಡೆಲ್ಲಿಯ ನಗರವನ್ನೆಲ್ಲಾ ನೋಡಿದರು

ಂ ಂ

ರಂಗೂನ್ 9— ರಷ್ಯಾ ಮತ್ತು ಜೈನವು ಬರ್ಮಾಕ್ಕೆ 850 ಲಕ್ಷ ರೂಗಳಸ್ಟು ಶೇಕಡಾ ಎರಡೂವರೆ ಬಡ್ಡಿ ಮೇಲೆ ಕೊಡಲು ಒಪ್ಪಿವೆ

ಂ ಂ

ಕೊಯಮತ್ತೂರು 9— ಭಾಷಾ ಸಮಸ್ಯೆಗಳು ರಾಜ್ಯಗಳ ಮಧ್ಯೆ ಚೈನಾ ಗೋಡೆಗಳಂತಾಗಬಾರದೆಂದು ಕೇರಳದ ಗೌರ್ನರು ಅಭಿಪ್ರಾಯಪಟ್ಟಿರುವರು

ಂ ಂ

ನವದೆಹಲಿ 8— ಷೇಕ್ ಅಬ್ದುಲ್ಲರ ಬಿಡುಗಡೆಯು ಕಾಶ್ಮೀರ ಪರಿಸ್ಥಿತಿಯನ್ನು ಮತ್ತೂ ಹೆಚ್ಚು ತೊಂದರೆದಾಯಕವಾಗಿ ಮಾಡಬಹುದೆಂದು ಹಿಂದೂ ಮಹಾಸಭೆಯ ನಾಯಕ ಶ್ರೀ ಎಸ್ ಸಿ ಚಟರ್ಜಿ ಹೇಳಿದರು.

ಂ ಂ

ಶಿವಮೊಗ್ಗ 9 — ಗ್ರಾಮಸ್ಥರಿಗೆ ಚೆನ್ನಾಗಿ ಅರ್ಥವಾಗುವುದರಿಂದ ಅಧಿಕಾರಿಗಳು ತನ್ನಡದಲ್ಲಿ ಮಾತನಾಡಬೇಕೆಂದು ಮುಖ್ಯಮಂತ್ರಿಗಳು ತಿಳಿಸಿರುವರು

ಬಿಡುಗಡೆಗೆ ಸಕಾಲವಲ್ಲ

ನವದೆಹಲಿ 7— ಷೇಕ್ ಅಬ್ದುಲ್ಲರ ಬಿಡುಗಡೆಗೆ ಇದು ಸರಿಯಾದ ಕಾಲವಲ್ಲ ವೆಂದು ಜಮ್ಮು ಮತ್ತು ಕಾಶ್ಮೀರ ಪ್ರಜಾ ಪರಿಷತ್ತಿನ ಅಧ್ಯಕ್ಷ ಪಂಡಿತ ಪ್ರೇವೆ ನಾಥ ಡೋಗ್ರಾ ಹೇಳಿರುವರು.

ಅರ್ಧ ಕೇಂದ್ರದ ಸಹಾಯ

ತಿರುವನಂತಪುರ 7— ಹರಿಜನರಿಗೆ ನ್ಯಾಯಾಂಗ ಸಹಾಯ ಮಾಡುವ ಕೇರಳ ಸರಕಾರದ ಯೋಜನೆಗೆ ಕೇಂದ್ರ ಸರ್ಕಾರವು ಅರ್ಧ ಖರ್ಚು ವಹಿಸಲು ಸಮ್ಮತಿಸಿದೆ.

ಪಂಜಾಬ್ ವಿಭಾಗವಾಗಲಿ

ಜಲಂಧರ 7— ಪಂಜಾಬು ರಾಜ್ಯದಲ್ಲಿ ಕಾಂತ ವಾತಾವರಣ ಸ್ಥಾಪಿಸಲು ಪಂಜಾಬನ್ನು ಭಾಷಾವಾರಿನ ಮೇಲೆ ವಿಭಾಗಿಸಬೇಕೆಂದು ಅಖಿಲ ಭಾರತ ಸಿಕ್ ವಿದ್ಯಾರ್ಥಿ ಸಂಘದವರು ಸೂಚಿಸಿದಾರೆ.

ಮೈಸೂರು ರಾಜ್ಯದಲ್ಲಿ ಶಿಶುಶಿಕ್ಷಣ

ಬೆಂಗಳೂರು 8— ಶಿಶು ಶಿಕ್ಷಣವನ್ನು ಸುಭದ್ರಗೊಳಿಸುವುದಕ್ಕಾಗಿ ರಾಜ್ಯ ಸರಕಾರವು ಶ್ರೀ ಜೆ ಬಿ ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ಹತ್ತು ಜನ ಸದಸ್ಯರ ಒಂದು ಸಮಿತಿಯನ್ನು ನಿಯುಕ್ತಿಸಿದೆ ; ಈ ಸಮಿತಿಯು ಶಿಶು ಶಾಲೆಗಳಿಗಾಗಿ ಯೋಗ್ಯ ಪಾಠಕ್ರಮ, ಶಿಶುಶಾಲಾ ಶಿಕ್ಷಕರ ಕನಿಷ್ಠ ಪದವಿ, ಶಿಶುಶಿಕ್ಷಕರ ತರಬೇತಿ ಮತ್ತು ಟ್ರೇನಿಂಗು ಅಭ್ಯಾಸಕ್ರಮದ ವಿಷಯ, ಸಲಕರಣೆ ಮತ್ತು ಇನ್ನಿತರ ಅನಾವರ್ತ ಅಂಶಗಳ ಬಗ್ಗೆ ಯೋಗ್ಯ ಶಿಫಾರಸು ಮಾಡುವುದು.

.... ನಮ್ಮ ಭಾರತ ....

1957 ನೇ ವರ್ಷದ ಪ್ರತಿರೂಪವನ್ನು ಇಟಾಲಿಯಲ್ಲಿ ಡಿಸೆಂಬರ್ 31 ನೇ ತಾರೀಖು ರಾತ್ರೆ ಬೈಸಿಕಲ್ ಮೇಲೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಯಿತು ; ಆ ಮೊಹಲ್ಲಾದ 30 ಮಂದಿ ಯುವಕರು ಮೆರವಣಿಗೆಯಲ್ಲಿದ್ದರು ; ಮೆರವಣಿಗೆಯು ಗಾಂಧಿನಗರ ಮತ್ತು ನೆಹ್ರೂಗಂಜ್ ಬೀದಿಗಳಲ್ಲೆಲ್ಲಾ ಸುತ್ತಿ, ಜನತಾ ಟಾಕೀಸಿನ ಹತ್ತಿರಕ್ಕೆ ರಾತ್ರೆ 11-45 ರ ಹೊತ್ತಿಗೆ ಬಂದಿತು : ಮೆರವಣಿಗೆದಾರರಿಗೆಲ್ಲಾ ಅಲ್ಲಿ ಸೋಡಾ ಲೈಮ್‌ಜೂಸ್ ಮುಂತಾದ ಪಾನೀಯಗಳು ಕೊಡಲಾಯಿತು ; ಮೆರವಣಿಗೆಯು ರಾತ್ರೆ ಒಟ್ಟು ಜಾಲನ್ನು ಮಧ್ಯ ರಾತ್ರೆ ತಲಪಿತು : ಅಲ್ಲಿ ನರ್ತನ, ಸಂಗೀತ ನಡೆದ ಸಂತರ, ಆ ಪ್ರತಿರೂಪವು ಸುಡಲ್ಪಟ್ಟಿತು.

ಅಧಿಕೃತ ಭಾಷಾ ಪ್ರಶ್ನೆ

ನವದೆಹಲಿ 9— ಅಧಿಕೃತ ಭಾಷೆಯ ಸಂಬಂಧವಾದ ಪಾರ್ಲಿಮೆಂಟಿನ ಸಮಿತಿಯು ಮೂರನೇ ದಿನವೂ ಅಧಿಕೃತ ಭಾಷಾ ಪ್ರಶ್ನೆಯ ಬಗ್ಗೆ ಸಾಮಾನ್ಯ ಚರ್ಚೆಯನ್ನು ಮುಂದುವರಿಸಿತು.

ನಾಳೆಯ ಪಂಚಾಂಗ

ಆ॥ ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣಜ್ಯೋಸ್ಯರಿಂದ
11 ಶನಿವಾರ ಷಷ್ಠಿ ಉತ್ತರ

ವುಡ್‌ಲ್ಯಾಂಡ್

ಶೀ ನಿ

10—1—58 ರಿಂದ

ಅಮೋಘ ಪ್ರಾರಂಭ

ದೇವಾನಂದ್ — ಕಲ್ಪನಾ ಕಾರ್ತಿಕ್

ಶಶಿಕಲಾ ಪಾಶ್ರ್ವಹಿಸಿರುವ

ನೌ ದೊ ಗಾರ

ಶೀ

Nau Do Gyara

ಅತ್ಯಮೋಘ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

10—1—58 ರಿಂದ

ಗುಣಸುಂದರಿ

(ತಮಿಳು)

ನಟವರ್ಗ— ಸಾವಿತ್ರಿ, ಜಮಿನಿ ಗಣೇಶ್
ಸಂಬಯ್ಯಾಂ, ಅಂಗರಾವ್, ಕರುಣಾನಿಧಿ

[ಪ್ರತಿದಿನ 3 ಆಟಗಳು]

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1—80

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ



— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿ ಮಿ ಟೆ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್

ಅಪೆರಾ— ವೈಭವ 4 ನೇ ವಾರ

ಮಾಯಾಬಜಾರ್

ಎಸ್. ಟಿ. ರಾಮಾರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ತೇಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

SHAKTI
SUDHA

A Superb Tonic

Protect the cow ಗೋ ಸಂರಕ್ಷಣೆ ಮಾಡಿ.

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ 8 ಆಣೆ ಅಂಚೆವೆಚ್ಚ

ಬೆಂಬಲಿಗರು ರೂ 10 (ಒಂದೇಸಾರಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣಾ ಕಾರ್ಯಕ್ಕೆ ಹೆಚ್ಚು ಪ್ರಚಾರ ನಡೆಯಲಿ

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed& Published by Dharma Prachara Nirata M S Krishna Rao at the Satyavadi Press Chamarajapuram Mysore